730 (648) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಕೇವಲ ರಾಮನಗರ, ಮಾಗಡಿ ಮತ್ತು ಚನ್ನಪಟ್ಟಣ ತಾಲ್ಲೂಕುಗಳಿಗೆ ಮಾತ್ರ ನೀಡಿದ್ದು, ಉಳಿದ ತಾಲ್ಲೂಕುಗಳ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಇದನ್ನು ರಾಜ್ಯದಾದ್ಯಂತ ವಿಸ್ತರಿಸಲು ಇರುವ ತೊಡಕಾದರೂ ಏನು, ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಈ ಯೋಜನೆಯನ್ನು ರಾಜ್ಯದ 13 ಜಿಲ್ಲೆಗಳ 74 ಹೋಬಳಿಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ

(ಆ) ಇದೊಂದು ಪ್ರಾಯೋಗಿಕ ಯೋಜನೆಯಾಗಿದ್ದು, ಹಾಲಿ ಇರುವ ಬೆಳೆ ವಿಮಾ ಯೋಜನೆಗಿಂತ ಇದು ಉತ್ತಮವೆಂದು ಕಂಡು ಬಂದಲ್ಲಿ ಮುಂಬರುವ ವರ್ಷಗಳಲ್ಲಿ ಇತರೇ ಜಿಲ್ಲೆಗಳಿಗೂ ಸಹ ಇದನ್ನು ವಿಸ್ತರಿಸುವ ವಿಷಯವನ್ನು ಪರಿಶೀಲಿಸಲಾಗುವುದು

731 (1222) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ನೀಡುವ ಬಿತ್ತನೆ ರಾಗಿ ಸುಮಾರು 300 ಕ್ವಿಂಟಾಲ್ ಅವಶ್ಯಕತೆ ಇದ್ದು, ಕೃಷಿ ಇಲಾಖೆಯಿಂದ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಇದಕ್ಕೆ ನೀಡಿರುವ ಸಹಾಯ ಧನವೆಷ್ಟು,

(ಇ) ಅಗತ್ಯವಿರುವ ಬಿತ್ತನೆ ರಾಗಿ ಹಾಗೂ ಜೋಳ ಪೂರೈಸಲು ಸರ್ಕಾರದ ತುರ್ತು ಕ್ರಮವೇನು,

(ಈ) ಬಿತ್ತನೆ ಬೀಜಗಳನ್ನು ಆಗಸ್ಟ್ ತಿಂಗಳ ಕೊನೆಯವರೆಗೂ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ದೊಡ್ಡಬಳ್ಳಾಪುರ ತಾಲ್ಲೂಕಿಗೆ ಇದುವರೆಗೆ 110 ಕ್ವಿಂಟಾಲ್ ರಾಗಿ ಹಾಗೂ 400 ಕ್ವಿಂಟಾಲ್ ಮುಸುಕಿನ ಜೋಳದ ಬಿತ್ತನೆ ಬೀಜ ಸರಬರಾಜಾಗಿದ್ದು ವಿತರಣೆಯು ಪ್ರಗತಿಯಲ್ಲಿದೆ

(ಆ) ರಾಗಿ ಮತ್ತು ಮುಸುಕಿನ ಜೋಳದ ಬಿತ್ತನೆ ಬೀಜದ ವಿತರಣೆಗೆ ಇದುವರೆವಿಗೂ ರೂ 13 75 ಲಕ್ಷಗಳ ರಿಯಾಯಿತಿ ನೀಡಲಾಗಿದೆ

(ಇ) ಅಗತ್ಯವಿರುವ ಬಿತ್ತನೆ ಬೀಜಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ

(ಈ) ಹೌದು